ಶ್ರೀ ಹೆಚ್.ಡಿ. ರೇವಣ್ಣ:– ಬೇರೆ ಕಡೆ 4–4 ಬೋಧಕರನ್ನು ಹಾಕುತ್ತೀರಿ. ಇರುವ ಕಡೆ ಮಾಡಿ.

ಅಧ್ಯಕ್ಷರು:– ಇರಬೇಕಲ್ಲ. ಇದ್ದರೆ ಹಾಕುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:– ನೀವು ಒಂದು ಕೆಲಸ ಮಾಡಿ, ಯಾರ್ಯಾರು ಪಿಹೆಚ್.ಡಿ. ಮಾಡಿದ್ದಾರೆಂದು ಒಂದು ಪಟ್ಟಿ ಇದ್ದರೆ ಅದನ್ನು ನಮಗೆ ಕಳುಹಿಸಿ ಕೊಟ್ಟರೆ . . . ಮಾನ್ಯ ಅಧ್ಯಕ್ಷರೆ, ಪಿಹೆಚ್.ಡಿ. ಇರುವವರನ್ನು ಹೆಚ್ಚು ಕಡಿಮೆ ಎಲ್ಲಾ ಕಡೆ appoint ಮಾಡಿಕೊಂಡಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಒಂದೇ ಕಾಲೇಜಿಗೆ ಕೇಳುತ್ತಿಲ್ಲ. ರಾಜ್ಯದಲ್ಲಿರುವ ಎಲ್ಲಾ ಕಾಲೇಜುಗಳಿಗೂ ಮಾಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:– ಖಂಡಿತವಾಗಿ, ನಿಮ್ಮ ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ. ಸ್ವಾಗತಿಸುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ.

7) **ವಿಷಯ:** 1985ರ ವಿಶೇಷ ನೇಮಕಾತಿ ನಿಯಮಗಳನ್ವಯ ಸ್ನಾತಕೋತ್ತರ ಪದವಿಯಲ್ಲಿ ರ್ಯಾಂಕ್ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ಆಯ್ಕೆ ಮಾಡುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಕರ್ನಾಟಕ ಸಿವಿಲ್ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು–ಎ ಮತ್ತು ಗುಂಪು–ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು, 1985 ದಿನಾಂಕ 11.4.1985ರಿಂದ ಜಾರಿಗೆ ಬಂದಿವೆ. ಈ ನಿಯಮಗಳ ಷೆಡ್ಯೂಲಿನಲ್ಲಿ ನಮೂದಿಸಿರುವ ಗ್ರೂಪ್–ಎ ಮತ್ತು ಗ್ರೂಪ್–ಬಿ ವೃಂದಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ

ಸೇರಿದವರ ಪ್ರಾತಿನಿಧ್ಯತೆ ಅನುಕ್ರಮವಾಗಿ ಶೇಕಡ 15 ಮತ್ತು 3 ಪ್ರಮಾಣಕ್ಕಿಂತ ಕಡಿಮೆ ಇದ್ದಲ್ಲಿ ಮತ್ತು ಸಂಬಂಧಿಸಿದ ವೃಂದಗಳಲ್ಲಿ ನೇರ ನೇಮಕಾತಿ ರಿಕ್ತ ಸ್ಥಾನಗಳು ನೇಮಕಾತಿ ಸಮಯದಲ್ಲೂ ಲಭ್ಯವಿದ್ದಲ್ಲಿ ವಿಶೇಷ ನೇಮಕಾತಿಯನ್ನು ಮಾಡಲು ಆಸ್ಪದವಿರುತ್ತದೆ.

ಮೇಲ್ಕಂಡ ನಿಯಮಗಳನ್ವಯ ಸಿಬ್ಬಂದಿ ಮತ್ತು ಆಡಳಿತ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಂದ, ಎಂ.ಎ., ಎಂ.ಎಸ್ಸಿ., ಎಂ.ಕಾಂ., ಕೋರ್ಸುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಲ್ಲಿ ಅವರುಗಳಲ್ಲಿಯೇ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದುಕೊಂಡು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅದೇ ಶೈಕ್ಷಣಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮೇಲ್ಕಂಡ ನಿಯಮಗಳ ಷೆಡ್ಯೂಲಿನಲ್ಲಿ ನಮೂದಿಸಿರುವ ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳ ನೇರ ನೇಮಕಾತಿ ಕೊರತೆ ಸ್ಥಾನಗಳ ಅಂಕಿ ಅಂಶಗಳನ್ನು ಪಡೆದು, ಕೊರತೆ ರಿಕ್ತ ಸ್ಥಾನಗಳು ಲಭ್ಯವಿದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಆಸ್ಪದ ಕಲ್ಪಿಸಲಾಗಿದೆ.

ಮೇಲ್ಕಂಡ ನಿಯಮಗಳನ್ವಯ, 1982–83ನೇ ಶೈಕ್ಷಣಿಕ ಸಾಲಿನಿಂದ 2001–02 ಶೈಕ್ಷಣಿಕ ಸಾಲಿನವರೆಗೆ ಒಟ್ಟು 95 ಅಭ್ಯರ್ಥಿಗಳನ್ನು ಆಯ್ಕೆ ನೇಮಕಾತಿ ಮಾಡಲಾಗಿದೆ. 2002–03, 2003–04, 2004–05, 2005–06, 2006–07 ಮತ್ತು 2007–08ನೇ ಸಾಲಿಗೆ ಸಂಬಂಧಪಟ್ಟಂತೆ ಮೇಲ್ಕಂಡ ನಿಯಮಗಳನ್ವಯ ನೇರ ನೇಮಕಾತಿ ಮಾಡಲು ಸಂಬಂಧಿಸಿದ ಆಡಳಿತ ಇಲಾಖೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕೊರತೆ ರಿಕ್ತ ಸ್ಥಾನಗಳು ವರದಿಯಾಗದ ಪ್ರಯುಕ್ತ ನೇರ ನೇಮಕಾತಿ ಮಾಡಿರುವುದಿಲ್ಲ. ಪ್ರಸ್ತುತ 2008–09ನೇ ಸಾಲಿನಿಂದ 2011–2012ನೇ ಸಾಲಿಗೆ ಸಂಬಂಧಪಟ್ಟಂತೆ ನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ದಿನಾಂಕ

29.12.2012 ರ ಪತ್ರದ ಮೂಲಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ 2008–2009 ನೇ ಸಾಲಿನಿಂದ 2011–2012– ನೇ ಶೈಕ್ಷಣಿಕ ಸಾಲುಗಳಲ್ಲಿ ಮೊದಲನೇ ಯತ್ನದಲ್ಲಿ ಎಂ.ಎ., ಎಂಎಸ್ಸಿ ಮತ್ತು ಎಂ.ಕಾಂ., ಪರೀಕ್ಷೆಗಳಲ್ಲಿ ಅವರುಗಳಲ್ಲಿಯೇ ಪ್ರಥಮ ದ್ವೀತಿಯ ಮತ್ತು ತೃತೀಯ ಸ್ಥಾನ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಲು ಕೋರಲಾಗಿದೆ. ಮತ್ತು ಸಚಿವಾಲಯದ ಸಂಬಂಧಿಸಿದ ಆಡಳಿತ ಇಲಾಖೆಗಳಿಗೆ ಮೇಲ್ಕಂಡ ಶೈಕ್ಷಣಿಕ ಸಾಲುಗಳಿಗೆ ಸಂಬಂಧಿಸಿದಂತೆ ಕೊರತೆ ರಿಕ್ತ ಸ್ಥಾನಗಳನ್ನು ವರದಿ ಮಾಡಲು ದಿನಾಂಕ 1.1.2013 ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದೆ. ಇಲಾಖೆಗಳಿಂದ ಕೊರತೆ ರಿಕ್ತ ಸ್ಥಾನಗಳು ವರದಿಯಾದಲ್ಲಿ ಮೇಲ್ಕಂಡ ನಿಯಮಗಳನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಅಧ್ಯಕ್ಷರೆ, 1985ರ ವಿಶೇಷ ನೇಮಕಾತಿ ನಿಯಮಗಳನ್ವಯ ಸ್ನಾತಕೋತ್ತರ ಪದವಿಯಲ್ಲಿ ರ್ಯಾಂಕ್ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಬೇಕೆಂದು ಅವರು ಆದೇಶವಿತ್ತು. 1985ರಿಂದ 2002ರವರೆಗೆ ಕೇವಲ 95 ಜನ ಅರ್ಹ ವಿದ್ಯಾರ್ಥಿಗಳನ್ನು ನೇಮಕಾತಿ ಮಾಡಲಾಗಿದೆ. ಆದರೆ 2002 ರಿಂದ ಇಲ್ಲಿಯವರೆಗೆ 12 ವರ್ಷಗಳ ಕಾಲ ಆ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರ ಕೈಬಿಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ವಿಶೇಷ ಗಮನಹರಿಸಬೇಕು. ಉತ್ತರದಲ್ಲಿ ಆಯಾ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದಿದ್ದೇವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಹೆಸರಿನಲ್ಲಿ ಈಗ ಸುಧೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ ಆದರೂ ಕೂಡ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಬೇಕೆಂದು ಏನು ಮನವಿಯನ್ನು ಮಾಡುತ್ತಿದ್ದಾರೆ, ಅದು ಸರ್ಕಾರದ ಗಮನದಲ್ಲೂ ಕೂಡ

ಇದೆ, ಅದನ್ನು ಸೂಕ್ತವಾಗಿ ಸರ್ಕಾರ ನಿರ್ಧಾರ ಮಾಡುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎಸ್. ಚಿಕ್ಕಮಾದು:– ಈ ದಿಕ್ಕಿನಲ್ಲಿ ವಿಶ್ವವಿದ್ಯಾಲಯಗಳಿಗೆ ದಿ:29.12.2012ರಲ್ಲಿ ಈ ಪತ್ರವನ್ನು ಬರೆದರೂ ಒಂದೂವರೆ ವರ್ಷದಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ರ್ಯಾಂಕ್ ಪಟ್ಟಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ಡಿಪಿಎಆರ್ ಅವರು ಒಂದು ವರ್ಷದಿಂದಲೂ ಈ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿಲ್ಲ, ಉದ್ದೇಶ ಪೂರ್ವಕವಾಗಿ ಬಹಳ ವಿಳಂಬ ಮಾಡುತ್ತಿದ್ದಾರೆ. ತ್ವರಿತಗತಿಯಲ್ಲಿ ಅದನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ..

ಅಧ್ಯಕ್ಷರು:– ಸರ್ಕಾರ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ನಿಮ್ಮ ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ, ತ್ವರಿತವಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಬಿ. ನಿಂಗಯ್ಯ:– 1985ರಿಂದ ಅದನ್ನು ಜಾರಿಗೆ ತಂದಿದ್ದಾರೆ, ಈ ರೀತಿ ಡಿಲೇ ಮಾಡುವುದಕ್ಕೆ ಕಾರಣವೇನು?

ಅಧ್ಯಕ್ಷರು:– ಸರ್ಕಾರ ಪಾಸಿಟಿವ್ ಉತ್ತರ ಕೊಟ್ಟಿದೆ, ಕಾರಣ ಬೇಡ.

ಶ್ರೀ ಬಿ.ಬಿ. ನಿಂಗಯ್ಯ:– ಈಗಲೂ ಕೂಡ ಸಾಕಷ್ಟು ವಿದ್ಯಾರ್ಥಿಗಳು ಬರುತ್ತಿದ್ದಾರೆ, ಈಗ outsourcing ತೆಗೆದುಕೊಳ್ಳುತ್ತಿರುವುದರಿಂದ ದಲಿತ ಮಕ್ಕಳಿಗೆ ಕೆಲಸ ಸಿಗುತ್ತಿಲ್ಲ. ಆ ದೃಷ್ಟಿಯಿಂದ ಅದನ್ನು ತ್ವರಿತವಾಗಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ:– ತ್ವರಿತವಾಗಿ ಮಾಡೋಣ.

ಶ್ರೀ ಕೆ. ಶಿವಮೂರ್ತಿ:– ಸರ್, ಅದನ್ನು ಕಾಲಮಿತಿಯಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ ಬ್ಯಾಕ್ ಲಾಗ್ ಆಗಿ ಪರಿವರ್ತನೆ ಮಾಡುತ್ತೀರಾ?

ಅಧ್ಯಕ್ಷರು:– ಅದೇ ಬೇರೆ, ಇದೇ ಬೇರೆ, ಅದು ಬರುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:– ಅದು ಬರುವುದಿಲ್ಲವೆಂದು ಗೊತ್ತು ಸರ್, ಆದರೆ ಒಂದು ವರ್ಷದಿಂದ ನೇಮಕಾತಿ ಮಾಡದೆ ಉದ್ದೇಶಪೂರ್ವಕವಾಗಿ ನಿಲ್ಲಿಸಿದ್ದಾರಲ್ಲ, ಆ ಕಾಲಮಿತಿಯಲ್ಲಿರುವ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸುತ್ತಾರೆಯೇ?

ಶ್ರೀ ಟಿ.ಬಿ. ಜಯಚಂದ್ರ:– ಇದಕ್ಕೆ ಆದ್ಯತೆ ಕೊಡಬೇಕೆಂದು ಹುದ್ದೆಗಳು ಮೀಸಲಾಗಿಲ್ಲ, ಮೀಸಲಾಗಿರುವ ಹುದ್ದೆಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸಚಿವ ಸಂಪುಟದ ಉಪ ಸಮಿತಿ ರಚನೆಯಾಗಿದೆ, ನಾವು ಪ್ರತಿಯೊಂದು ಇಲಾಖೆಯನ್ನೂ ಕೂಡ ನಾವು review ಮಾಡುತ್ತಿದ್ದೇವೆ, ಆ ಸಮಿತಿಯಲ್ಲಿ ನಾನೂ ಇದ್ದೇನೆ, ಅದಕ್ಕೆ ಆದ್ಯತೆಯನ್ನು ಕೊಡುತ್ತೇವೆ.

8) **ವಿಷಯ:** ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದಲ್ಲಿ ಅವ್ಯವಹಾರಗಳು ಹಾಗೂ ಸ್ವಜನ ಪಕ್ಷಪಾತ ನಡೆಯುತ್ತಿದೆ ಎನ್ನುವ ಆರೋಪಗಳ ಬಗ್ಗೆ.

ಕರ್ನಾಟಕ ವಿಧಾನಸಭೆ 14ನೇ (4 ನೇ ಅಧಿವೇಶನ) ಕಾರ್ಯಕಲಾಪಗಳ ಪಟ್ಟಿ

5. ಗಮನಸೆಳೆಯುವ ಸೂಚನೆ ::–

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು):– ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ದಲ್ಲಿ ಸಿಬ್ಬಂದಿ ನೇಮಕಾತಿ, ಬಡ್ತಿಯಲ್ಲಿ ಹಾಗೂ ಪೆಟ್ರೋಲ್ ಬಂಕ್ ವ್ಯವಹಾರದಲ್ಲಿ ಅವ್ಯವಹಾರಗಳು ಹಾಗೂ ಸ್ವಜನ ಪಕ್ಷಪಾತಗಳು ನಡೆದಿದೆ